# ವಿಶ್ವನಾಥನ ದಿವ್ಯಧಾಮ ವಾರಾಣಸಿ

**ಗಿರಿಜಾದೇವಿ**

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ವಾರಾಣಸಿಯು ಅನಾದಿಕಾಲದಿಂದಲೂ ಆಧ್ಯಾತ್ಮಿಕ, ಧಾರ್ಮಿಕ ಕೇಂದ್ರವಾಗಿದೆ. ಕಾಶೀಯಾತ್ರೆ, ಕಾಶಿಯಲ್ಲಿ ತೀರ್ಥಸ್ನಾನ, ವಿಶ್ವನಾಥನ ದಿವ್ಯದರ್ಶನ, ಕಾಶಿಯಲ್ಲಿ ಮರಣ – ಎಲ್ಲವೂ ಭಕ್ತರನ್ನು ಮುಕ್ತಿಯೆಡೆಗೆ ಕರೆದೊಯ್ಯುವುವು ಎಂದೇ ನಂಬಲಾಗಿದೆ. ಈ ಹಿನ್ನೆಲೆಯಲ್ಲಿ ಹಲವು ವಿಷಯಗಳನ್ನು ವಿವರಿಸಿರುವ ಲೇಖಕಿ, ರಾಮಕೃಷ್ಣ ಆಶ್ರಮದ ಭಕ್ತರು; ಹಾಗೂ ಉತ್ತಮ ಲೇಖಕಿ. ವಾರಾಣಸಿಯ ರಾಮಕೃಷ್ಣ ಸೇವಾಶ್ರಮದಲ್ಲಿರುವ ಅವರು, ಕಾಶಿಯನ್ನು ಕುರಿತು 'ಕಾಶಿ ಪುಣ್ಯರಾಶಿ' ಎಂಬ ಗ್ರಂಥವನ್ನು ಬರೆದಿದ್ದಾರೆ; ಇನ್ನಿತರ ಪುಸ್ತಕಗಳನ್ನು ರಚಿಸಿದ್ದಾರೆ.

ವಾರಾಣಸಿ ಪುಣ್ಯತೀರ್ಥದಲ್ಲಿ ವಿರಾಜಿಸುತ್ತಿರುವ ಶಿವನ ಜ್ಯೋತಿರ್ಲಿಂಗವನ್ನು ಪುರಾಣಗಳಲ್ಲಿ 'ವಿಶ್ವನಾಥ' ಎಂದು ಕರೆಯಲಾಗಿದೆ. 'ಕಾಶ್ಯಾಂ ಮರಣಾತ್ ಮುಕ್ತಿ' – ಈ ರೀತಿಯ ಮುಕ್ತಿಕ್ಷೇತ್ರ ಬ್ರಹ್ಮಾಂಡದಲ್ಲೆಲ್ಲೂ ಕಾಣಸಿಗದು. ಸಾಧನೆಯ ನಿರ್ಬಂಧವಿಲ್ಲದ ಇಲ್ಲಿ ಮರಣಿಸಿದರೆ ಕೈವಲ್ಯ ಪ್ರಾಪ್ತಿ! ಈ ಪುಣ್ಯಧಾಮಕ್ಕೆ ಆನಂದ ಕಾನನ, ಪೂರ್ಣತೀರ್ಥ, ತಪಸ್ಥಲಿ, ಅವಿಮುಕ್ತ, ಆನಂದವನ, ನರ್‌ಭವಭೂಮಿ, ರುದ್ರವಾಸ, ಮಹಾಸ್ಮಶಾನ, ವಾರಾಣಸಿ, ಕಾಶಿ ಎನ್ನುವ ಹೆಸರುಗಳು ಪುರಾಣಗಳಲ್ಲಿ ಲಭ್ಯ. ಬ್ರಿಟಿಷರ ಆಳ್ವಿಕೆಯಲ್ಲಿ 'ಬನಾರಸ್' ಎನಿಸಿಕೊಂಡಿತು. ಆದರೆ ಎಲ್ಲರ ನಾಲಿಗೆಗಳಲ್ಲಿ ನಲಿದಾಡುವ ಹೆಸರು 'ಕಾಶಿ'.



ವಿಶ್ವನಾಥನ ಈ ದಿವ್ಯಧಾಮ ಕಾಶಿಕ್ಷೇತ್ರದ ಆವಿರ್ಭಾವಕ್ಕೆ ಕಾರಣ ದಕ್ಷ ನಿರ್ವಹಿಸಿದ ಯಜ್ಞ. ಅತಿ ಕ್ಷುಲ್ಲಕ ಕಾರಣಕ್ಕೆ ದಕ್ಷ ತನ್ನ ಅಳಿಯ ಶಿವನನ್ನು ಬಹಳವಾಗಿ ದ್ವೇಷಿಸುತ್ತಿದ್ದ. ಇದೇ ಕಾರಣಕ್ಕೆ ಶಿವನನ್ನು ಯಜ್ಞಕ್ಕೆ ಆಹ್ವಾನಿಸಲಿಲ್ಲ. ಆಮಂತ್ರಣವಿಲ್ಲದೆ ಯಜ್ಞಕ್ಕೆ ಹೋಗುವುದು ಬೇಡವೆಂದು ಹೇಳಿದ ಪತಿಯ ಮಾತನ್ನು ಲಕ್ಷಿಸದೆ ಸತೀದೇವಿ, ತಂದೆಯ ಆಹ್ವಾನ ಮಗಳಿಗೆ ಅನಗತ್ಯ ಎಂದು ವಾದಿಸಿ, ಶಿವಗಣಗಳ ರಕ್ಷಣೆಯಲ್ಲಿ ಯಜ್ಞಶಾಲೆಗೆ ಆಗಮಿಸಿದಳು. ಮಗಳನ್ನು ಕಂಡ ದಕ್ಷ ಕೋಪೋದ್ರಿಕ್ತನಾದ. ಮಗಳನ್ನು ಹಾಗೂ ಅಳಿಯನನ್ನು ಮನಬಂದಂತೆ ನಿಂದಿಸತೊಡಗಿದ. ತನಗಾದ ಅವಮಾನವನ್ನು ನುಂಗಿಕೊಂಡರೂ, ಪತಿನಿಂದನೆಯನ್ನು ಕೇಳಿ ದುಃಖಿತಳಾದ ಸತಿ ಪ್ರಾಣತ್ಯಾಗ ಮಾಡಿಬಿಟ್ಟಳು! ವಿಷಯ ತಿಳಿದ ಶಿವ ಕ್ರೋಧಿತನಾಗಿ, ಕ್ಷಣಮಾತ್ರದಲ್ಲಿ ಭೈರವನನ್ನು ಸೃಷ್ಟಿಸಿ ದಕ್ಷನನ್ನು ಶಿಕ್ಷಿಸಲು ಆದೇಶಿಸಿದ. ಯಜ್ಞಶಾಲೆ ಧ್ವಂಸವಾಯಿತು. ದಕ್ಷನ ಸಂಹಾರವಾದರೂ ಕರುಣಾಮಯ ಶಿವನ ಅನುಗ್ರಹದಿಂದ ಅವನು ಮತ್ತೆ ಜೀವ ಪಡೆದ.

ಸತೀದೇವಿಯ ನಿರ್ಜೀವ ದೇಹವನ್ನು ಹೆಗಲಿಗೇರಿಸಿದ ಶಿವ ಹುಚ್ಚನಂತೆ ಅಲೆದಾಡತೊಡಗಿದ. ಈ ಪರಿಸ್ಥಿತಿಯಿಂದ ಶಿವನನ್ನು ಪಾರುಮಾಡಲು ತೀರ್ಮಾನಿಸಿದ ಮಹಾವಿಷ್ಣು ತನ್ನ ಚಕ್ರದ ನೆರವಿನಿಂದ ಸತಿಯ ಮೃತದೇಹವನ್ನು ಚೂರು ಚೂರುಗಳಾಗಿ ತುಂಡರಿಸಿದ! ಸತಿಯ ಶರೀರದ ಅಂಗಾಂಗಳು ಶಕ್ತಿಪೀಠಗಳಾದವು.

ಸತೀದೇವಿಯ ಸುಂದರ ಮುಖಮಂಡಲ ಬಿದ್ದ ಸ್ಥಳದಲಿಯೇ ಈಗ ಕಾಶಿಯಲ್ಲಿ ವಿಶಾಲಾಕ್ಷಿ ಮಂದಿರವಿದೆ ಎಂದು 'ಕಾಶೀಖಂಡ'ದಲ್ಲಿ ವರ್ಣಿತವಾಗಿದೆ. ಶಿವ ಈ ಸ್ಥಳದಲ್ಲಿಯೇ ಧ್ಯಾನಮಗ್ನನಾಗಿ ಕುಳಿತುಬಿಟ್ಟ. ಪುರಾಣಗಳಲ್ಲಿ ಈ ಸ್ಥಳವನ್ನು 'ಗೌರಿಮುಖ ತೀರ್ಥ' ಎಂದು ಕರೆಯಲಾಗಿದೆ.

ಶಿವನ ಮಗನಿಂದ ಮಾತ್ರವೇ ತನಗೆ ಸಾವು ಬರಲಿ ಎಂದು ವರಪಡೆದಿದ್ದ ತಾರಕಾಸುರ ಮೂರು ಲೋಕಗಳನ್ನು ತಲ್ಲಣಗೊಳಿಸುತ್ತಿದ್ದ. ತಮ್ಮನ್ನು ಈ ಕಂಟಕದಿಂದ ಪಾರುಮಾಡಬೇಕೆಂದು ದೇವತೆಗಳೆಲ್ಲರೂ ಒಟ್ಟಿಗೆ ಬಂದು ಶಿವನಲ್ಲಿ ಮೊರೆಯಿಟ್ಟರು. ಶಿವ ಕೈಲಾಸಕ್ಕೆ ಹಿಂತಿರುಗುವ ಮೊದಲು, ಪರಮ ಪವಿತ್ರವಾದ ಪಂಚಕ್ರೋಶಗಳ ಆಳತೆಯ ಗೌರೀಮುಖ ತೀರ್ಥವನ್ನು, ಪ್ರಳಯ ಕಾಲದಲ್ಲಿಯೂ ನಾಶವಾಗದಂತೆ ರಕ್ಷಿಸಲು ನಿರ್ಧರಿಸಿ ತನ್ನ ತ್ರಿಶೂಲಾಗ್ರದಲ್ಲಿ ಸ್ಥಾಪಿಸಿದ.

ಸತೀದೇವಿಯು ಮತ್ತೆ ಶಿವನನ್ನು ಪತಿಯಾಗಿ ಪಡೆಯಲು ಹಿಮವಂತನ ಮಗಳು ಪಾರ್ವತಿಯಾಗಿ ಜನ್ಮ ತಳೆದಳು. ಕಠೋರ ತಪಸ್ಸನ್ನಾಚರಿಸಿ ತನ್ನ ಇಷ್ಟಾರ್ಥವನ್ನು ಈಡೇರಿಸಿಕೊಂಡಳು! ಶಿವ ಪಾರ್ವತಿಯರು ಬಹಳ ಕಾಲದವರೆಗೆ ಪರ್ವತರಾಜನ ಮನೆಯಲ್ಲೆ ವಾಸಿಸಿದರು. ಮದುವೆಯಾದ ಮಗಳು ತೌರಿನಲ್ಲಿಯೇ ಉಳಿಯುವುದು ಅವಮಾನಕರವೆಂದು ಭಾವಿಸಿದ ಈ ದೇವದಂಪತಿ ತ್ರಿಶೂಲಾಗ್ರದಲ್ಲಿ ಶೋಭಾಯಮಾನವಾಗಿ ಪ್ರಕಾಶಿಸುತ್ತಿದ್ದ 'ಗೌರಿಮುಖ ತೀರ್ಥ'ಕ್ಕೆ ಆಗಮಿಸಿದರು.

ದೇವಶಿಲ್ಪಿ ವಿಶ್ವಕರ್ಮ ಈ ಪುಣ್ಯಕ್ಷೇತ್ರದಲ್ಲಿ ಮಣಿರತ್ನಗಳಿಂದ ಭವನಗಳನ್ನು ನಿರ್ಮಿಸಿದ. ಅಲ್ಲಲ್ಲಿ ತಿಳಿನೀರಿನ ಕೊಳಗಳು, ಸಣ್ಣ

ಸಣ್ಣ ನದಿಗಳು ಹೂತೋಟಗಳು, ಫಲಭರಿತ ಹಣ್ಣುಗಳಿಂದ ತುಂಬಿದ ಮರಗಳು ಮಣಿಖಚಿತ ರಸ್ತೆಗಳು, ಲತಾಕುಂಜಗಳು, ಚಿಲಿಪಿಲಿ ಗುಟ್ಟುವ ಹಕ್ಕಿಗಳು ಇತ್ಯಾದಿ ಸೃಷ್ಟಿಯಾದುವು. ಈ ಸುಂದರವಾದ ನಗರದಲ್ಲಿ ಶಿವ-ಪಾರ್ವತಿಯರು ಆನಂದದಿಂದ ವಿಹರಿಸುತ್ತಿದ್ದ ಕಾರಣ 'ಆನಂದಕಾನನ'ವೆನಿಸಿತು.

ಶಿವ-ಪಾರ್ವತಿಯರ ಸಾನ್ನಿಧ್ಯ ಮತ್ತು ಆನಂದಕಾನನದ ಆಕರ್ಷಣೆಗೊಳಗಾದ ಇತರ ದೇವತೆಗಳು, ಶಿವನ ಗಣಗಳು, ನಾಗರು, ಯಕ್ಷರು, ಇತ್ಯಾದಿ ಎಲ್ಲರೂ ಬಂದು ಇಲ್ಲಿ ನೆಲೆಸಿದರು. ಈ ಕ್ಷೇತ್ರದಲ್ಲಿ ಗಂಗೆಯು ಉತ್ತರ ವಾಹಿನಿಯಾಗಿ ಹರಿಯುವುದೂ ಒಂದು ವಿಶಿಷ್ಟತೆ ಎನ್ನಲಾಗಿದೆ. ಈ ಕ್ಷೇತ್ರ ಗಂಗೆಯ ತೀರದಲ್ಲಿ ಉತ್ತರ ದಿಕ್ಕಿಗೆ ವರುಣ ಹಾಗೂ ದಕ್ಷಿಣಕ್ಕೆ ಅಸಿ ನದಿಗಳ ಮಧ್ಯ ಭಾಗದಲ್ಲಿ ನೆಲೆಸಿರುವುದರಿಂದ 'ವಾರಾಣಸಿ'ಯಾಯಿತು.

ಸೃಷ್ಟಿಯ ಪೂರ್ಣ ಜವಾಬ್ದಾರಿಯನ್ನು ವಿಷ್ಣುವಿಗೆ ನೀಡಲಾಯಿತು. ಯಾವುದೇ ಕಾರ್ಯದಲ್ಲಿ ಪೂರ್ಣ ಯಶಸ್ಸು ಪ್ರಾಪ್ತಿಯಾಗಬೇಕಾದರೆ ತಪಸ್ಸು ಅನಿವಾರ್ಯ. ಕಾಶಿ ಕ್ಷೇತ್ರದ ಉತ್ತರ ಭಾಗದಲ್ಲಿ ಹರಿಯುವ ವರುಣಾ ನದಿ ಮತ್ತು ದಕ್ಷಿಣದ ಅಸಿ ನದಿ. ಇವುಗಳ ಸುಮಾರು ಮಧ್ಯಭಾಗದಲ್ಲಿ ವಿಷ್ಣು ತನ್ನ ಚಕ್ರದಿಂದ ಒಂದು ಕೊಳವನ್ನು ನಿರ್ಮಿಸಿ ಅದರ ಸಮೀಪದಲ್ಲಿ ತಪಸ್ಸಿಗೆ ಕುಳಿತ. ತಪಸ್ಸಿನ ತಾಪಕ್ಕೆ ವಿಷ್ಣುವಿನ ಶರೀರದಿಂದ ಹರಿದು ಬಂದ ಬೆವರಿನಿಂದ ಕೊಳ ತುಂಬಿಹೋಯಿತು. ವಿಷ್ಣು ಐವತ್ತು ಸಾವಿರ ವರ್ಷ ತಪೋನಿರತನಾಗಿದ್ದ ಎಂದು ಕಾಶಿಖಂಡದಲ್ಲಿ ವರ್ಣಿತವಾಗಿದೆ.

ಶಿವಪಾರ್ವತಿಯರು, ವಿಹಾರಕ್ಕೆ ಹೊರಟ ಸಂದರ್ಭದಲ್ಲಿ ತಪೋನಿರತ ವಿಷ್ಣುವನ್ನು ಗಮನಿಸಿದ ಶಿವ ಆನಂದದಿಂದ ತಲೆದೂಗಿದ. ಆಗ ಅವನ ಕಿವಿಯನ್ನು ಅಲಂಕರಿಸಿದ್ದ ಮಣಿಖಚಿತ ಕರ್ಣಾಭರಣ ಕಳಚಿ ಕೆಳಗಿನ ಕುಂಡದಲ್ಲಿ ಬಿತ್ತು! ವಿಷ್ಣುವನ್ನು ಸಮೀಪಿಸಿದ ಶಿವ, ''ಹೇ ನಾರಾಯಣ, ನೀನು ಚಕ್ರದಿಂದ ಸೃಷ್ಟಿಸಿದ ಈ ಪವಿತ್ರ 'ಚಕ್ರತೀರ್ಥ'ದಲ್ಲಿ ನನ್ನ ಕಿವಿಯಿಂದ 'ಮಣಿಕರ್ಣಿಕಾ' ಹೆಸರಿನ ಮಣಿಖಚಿತ ಕರ್ಣಾಭರಣ ಬಿದ್ದುಹೋಯಿತು. ಈ ಸ್ಥಾನ ಮಣಿಕರ್ಣಿಕ ಹೆಸರಿನಿಂದ ವಿಖ್ಯಾತವಾಗುತ್ತದೆ'' ಎಂದು ವರವಿತ್ತ. ಶಂಕರ ಮತ್ತೊಂದು ವರವನ್ನು ಅನುಗ್ರಹಿಸಲು ಸಿದ್ಧನಾದಾಗ, ಮಹಾವಿಷ್ಣು ಹೇಳಿದ: ''ಸದಾ ಭವಾನೀಸಹಿತ ನಿನ್ನ ದರ್ಶನ ಭಾಗ್ಯ ಬಯಸುತ್ತೇನೆ. ಹೇಗೆ ಈ ಸಂಸಾರದಲ್ಲಿ ನಿನ್ನ ಹೊರತು ಬೇರೆ ಮಂಗಳದಾತರು ಯಾರೂ ಇಲ್ಲವೋ, ಅದೇ ರೀತಿಯಲ್ಲಿ ಈ ಆನಂದಕಾನನವಲ್ಲದೆ ಬೇರಾವ ಸ್ಥಾನವೂ ಅಧಿಕ ಶುಭಪ್ರದವಾಗದೆ ಇರಲಿ. ಯೋಗ, ವ್ರತ, ತಪಸ್ಸು, ದಾನ ಮತ್ತು ಸತ್ಕರ್ಮಗಳು ಇಲ್ಲದೆಯೇ ಈ ಮಹಾಕ್ಷೇತ್ರದಲ್ಲಿ ಅನಾಯಾಸವಾಗಿ ಮೋಕ್ಷ ಪ್ರಾಪ್ತಿಯಾಗಲಿ. ಮಾನವ ಮಾತ್ರರಲ್ಲದೆ ಸಕಲ ಜೀವರಾಶಿಗೂ ಮುಕ್ತಿ ಪ್ರಾಪ್ತಿಯಾಗಲಿ. ಕಾಶಿ ನಾಮಸ್ಮರಣೆಯಿಂದಲೇ ಪಾಪಗಳು ದೂರವಾಗಲಿ. ಇಲ್ಲಿ ಸದಾ ಸತ್ಯಯುಗ ಮತ್ತು ಉತ್ತರಾಯಣ ಕಾಲ ವಿದ್ಯಮಾನವಿರಲಿ. ಈಶ್ವರನೆಂಬ ಜ್ಯೋತಿ ಸತತವಾಗಿ ಪ್ರಕಾಶಿಸುತ್ತಿರುವುದರಿಂದ ಈ ಕ್ಷೇತ್ರ 'ಕಾಶಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಲಿ.'' ಶಿವ ಆನಂದದಿಂದ 'ಅಸ್ತು' ಎಂದ.

ಅಸಂಖ್ಯ ಶಿವಲಿಂಗಗಳ ಕ್ಷೇತ್ರ ಕಾಶಿ. ಗಂಗಾ ತೀರದ ಘಾಟ್‌ಗಳಲ್ಲಿ ರಸ್ತೆಯ ಬದಿಗಳಲ್ಲಿ ಎತ್ತ ನೋಡಿದರೆ ಅತ್ತ ಶಿವಲಿಂಗಗಳು! ಈ ನೋಟ ಬೇರೆ ಕ್ಷೇತ್ರಗಳಲ್ಲಿ ಕಾಣಸಿಗದು. ಇದಕ್ಕೊಂದು ಕಾರಣ 'ಕಾಶಿಖಂಡ' ಗ್ರಂಥದಲ್ಲಿ ವರ್ಣಿತವಾಗಿದೆ. ಆ ಪ್ರಕರಣವನ್ನು ಸಂಕ್ಷಿಪ್ತವಾಗಿ ಇಲ್ಲಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಪದ್ಮಕಲ್ಪದ ಸ್ವಾಯಂಭುವ ಮನ್ವಂತರದಲ್ಲಿ ಅರುವತ್ತು ವರ್ಷಗಳ ಕಾಲ ಭೀಕರ ಬರಗಾಲದಲ್ಲಿ ಬ್ರಹ್ಮನ ಸೃಷ್ಟಿ ನಾಶವಾಗುವ ಸ್ಥಿತಿಗೆ ಬಂದಿತ್ತು. ಈ ಪರಿಸ್ಥಿತಿಯಿಂದ ಪಾರಾಗುವ ಉಪಾಯವನ್ನು ಚಿಂತಿಸುತ್ತಿದ್ದ ಬ್ರಹ್ಮದೇವನಿಗೆ, ರಾಜರ್ಷಿ ರಿಪುಂಜಯ ರಾಜ್ಯಭಾರ ನಡೆಸಿದರೆ ದೇಶ ಸುಭಿಕ್ಷವಾಗುತ್ತದೆಂದು ಬೋಧೆಯಾಯಿತು. ತಪೋನಿರತನಾಗಿದ್ದ ರಿಪುಂಜಯನಿಗೆ ವಿಷಯ ತಿಳಿಸಿದ. ದಿವೋದಾಸನೆಂಬ ಬಿರುದು ಪಡೆದಿದ್ದ ರಿಪುಂಜಯ ಬ್ರಹ್ಮನ ಕೋರಿಕೆಗೆ ಒಪ್ಪಿದ. ಆದರೆ ತನ್ನ ಒಂದು ನಿಬಂಧನೆಯನ್ನು ಬ್ರಹ್ಮನಿಗೆ ಹೀಗೆ ತಿಳಿಸಿದ: ''ನಾನು ದೊರೆಯಾದರೆ ದೇವತೆಗಳು ಯಾರೂ ಭೂಲೋಕದಲ್ಲಿ ಇರುವಂತಿಲ್ಲ. ಅವರೆಲ್ಲರೂ ಅವರವರ ಲೋಕಕ್ಕೆ ಹೋಗಲಿ. ನನ್ನ ತಪೋಬಲದಿಂದಲೇ ರಾಜ್ಯವಾಳುತ್ತೇನೆ.'' ಈ ಷರತ್ತಿಗೆ ಬ್ರಹ್ಮ ಅನಿವಾರ್ಯವಾಗಿ ಒಪ್ಪಲೇಬೇಕಾಯಿತು. ಶಿವನನ್ನು ಕಾಶಿ ತ್ಯಾಗಕ್ಕೆ ಒಪ್ಪಿಸುವುದು ಹೇಗೆ ಎಂದು ಚಿಂತಿತನಾದ. ದೇವತೆಗಳ ಸಮಯದ ಗಣನೆಗೂ ಮರ್ತ್ಯಲೋಕದ ಮಾನವರ ಸಮಯ ಗಣನೆಗೂ ಸಾವಿರ ಸಾವಿರ ವರ್ಷಗಳ ವ್ಯತ್ಯಾಸ. ದಿವೋದಾಸನ ಆಳ್ವಿಕೆ ದೇವತೆಗಳ ಲೆಕ್ಕದಲ್ಲಿ ಅತ್ಯಲ್ಪ ಎಂದು ನಿಶ್ಚಿಂತನಾದ.

ಬ್ರಹ್ಮದೇವ ಈ ವಿಷಯವನ್ನು ಶಿವನಿಗೆ ತಿಳಿಸಲು ಆಗಮಿಸಿದಾಗ, ಶಿವ ವೃಷಭಾರೂಢನಾಗಿ ತಪೋನಿರತ ಮಂದರಪರ್ವತನಿಗೆ ವರ ಪ್ರಸಾದಿಸಲು ಹೊರಟಿದ್ದ. ಶಿವನ ಆಹ್ವಾನವನ್ನು ಸ್ವೀಕರಿಸಿ ಬ್ರಹ್ಮನೂ ಶಿವನೊಂದಿಗೆ ಹೊರಟ. ಮಂದರನು ತನ್ನ ತಪಸ್ಸಿಗೆ ಕಾರಣ ತಿಳಿಸಿದ್ದು ಹೀಗೆ, ''ಪ್ರಭೋ, ನಾನೂ ಸಹ ಈ ಕಾಶಿ ಕ್ಷೇತ್ರದಂತೆ ಒಂದು ಪವಿತ್ರ ಸ್ಥಳವಾಗಲು ಬಯಸುತ್ತೇನೆ. ನೀವು ಇಂದಿನಿಂದಲೇ ಪಾರ್ವತೀ ಸಮೇತರಾಗಿ ಗಣಸಮೂಹದೊಂದಿಗೆ ನನ್ನ ಶಿಖರದ ಮೇಲೆ ಕುಶದ್ವೀಪದಲ್ಲಿ ವಾಸಕ್ಕೆ ಆಗಮಿಸಬೇಕು''. ಈ ಮಾತು ಕೇಳಿದ ಶಿವ ಚಿಂತಿತನಾದಂತೆ ಕಂಡ. ಬ್ರಹ್ಮನಿಗೆ ಪರಿಸ್ಥಿತಿಯ ಅರಿವಾಯಿತು. ತನ್ನ ವಚನಬದ್ಧತೆಯನ್ನು ವಿವರಿಸಿ ಹೀಗೆ ಪ್ರಾರ್ಥಿಸಿದ. ''ಪ್ರಭೂ, ನೀವು ಅಧಿಕ ಸಮಯ ಕಾಶಿವಿರಹವನ್ನು ಅನುಭವಿಸುವ ಪರಿಸ್ಥಿತಿಯೇನೂ ಇರಲಾರದು. ರಾಜ್ಯದಲ್ಲಿ ಅನಾಚಾರಗಳು, ಅಧರ್ಮ ಇಲ್ಲದಿರುವಷ್ಟು ಕಾಲವೇ ದಿವೋದಾಸನ ಆಳ್ವಿಕೆ. ಅಧರ್ಮದ ಅಂಕುಶವಾಯಿತೆಂದರೆ ಅವನ ಆಳ್ವಿಕೆ ಅಂತ್ಯವಾದಂತೆಯೇ. ಈ ನಿಬಂಧನೆಯನ್ನು ರಾಜ ಒಪ್ಪಿಕೊಂಡಿದ್ದಾನೆ.'' ಬ್ರಹ್ಮನ ಮರ್ಯಾದೆಯ ರಕ್ಷಣೆಗೆ ಮತ್ತು ಮಂದರನಿಗೆ ಮುದ ನೀಡುವುದಕ್ಕಾಗಿ ಕಾಶಿನಗರವನ್ನು ಬಿಟ್ಟು ಹೊರಡಲು ಶಿವ ಸಮ್ಮತಿಸಿದ.

ಕಾಶೀಕ್ಷೇತ್ರವನ್ನು ಬಿಟ್ಟು ಹೊರಡುವಾಗ, ಶಿವ ತನ್ನ ಪ್ರಾಣ ಸಮಾನವಾದ ಕಾಶೀಕ್ಷೇತ್ರದ ರಕ್ಷಣೆಗಾಗಿ, ಸಾಧಕರಿಗೆ ಸಿದ್ಧಿಯನ್ನು ಅನುಗ್ರಹಿಸುವ ಸಾಮರ್ಥ್ಯವುಳ್ಳ ಜೀವಿಗಳಿಗೆ ಮುಕ್ತಿ ನೀಡಿ, ಕ್ಷೇತ್ರದಲ್ಲಿ ಸದಾ ತನ್ನ ಹಾಜರಿಯನ್ನು ಸೂಚಿಸುವ ತನ್ನ ಪ್ರತಿರೂಪವೇ ಆದ ಒಂದು ಲಿಂಗದ ಆಕಾರವನ್ನು ಪ್ರತಿಷ್ಠಿಸಿದ.

ಶಿವನ ಸಾನ್ನಿಧ್ಯ ಸದಾ ಪ್ರಸ್ತುತವಿರುವ ಕಾಶೀಕ್ಷೇತ್ರ 'ಅವಿಮುಕ್ತಕ ಕ್ಷೇತ್ರ' ಎನಿಸಿಕೊಂಡಿತು. ಭೂಮಂಡಲದಲ್ಲಿ ಶಿವನಿಂದಲೇ ಪ್ರತಿಷ್ಠಿತವಾದ ಆದಿಲಿಂಗವೇ 'ಅವಿಮುಕ್ತೇಶ್ವರ'.

ಶಿವನನ್ನು ಅನುಸರಿಸಿ ಕ್ಷೇತ್ರದಲ್ಲಿ ನೆಲೆಸಿದ್ದ ದೇವತಾ ಸಂಕುಲ ತಮ್ಮ ತಮ್ಮ ಹೆಸರಿನಲ್ಲಿ ಲಿಂಗಗಳ ಪ್ರತಿಷ್ಠೆ ನೆರವೇರಿಸಿದರು. ಕಾಶೀಕ್ಷೇತ್ರದಲ್ಲಿ ಲಿಂಗ ಪ್ರತಿಷ್ಠೆ ಪುಣ್ಯಪ್ರದ ಎಂದು ಭಾವಿಸಿ, ಇಲ್ಲಿಗೆ ಬರುವ ಭಕ್ತರಲ್ಲಿ ಅನೇಕರು ಇಲ್ಲಿ ಲಿಂಗ ಪ್ರತಿಷ್ಠಾಕಾರ್ಯ ನೆರವೇರಿಸುತ್ತಾರೆ.

ದಿವೋದಾಸ ಅತ್ಯಂತ ದಕ್ಷತೆಯಿಂದ ರಾಜ್ಯಪರಿಪಾಲನೆ ಮಾಡುತ್ತಿದ್ದ. ಅನೇಕ ವರ್ಷಗಳು ಕಳೆದವು. ದಿವೋದಾಸನ ತಪಸ್ಸಿನ ಶಕ್ತಿ ಅಪಾರ! ರಾಜ್ಯ ಸುಭಿಕ್ಷವಾಯಿತು, ಪ್ರಜೆಗಳು ಸಂತೃಪ್ತರಾದರು. ಆದರೆ ಒತ್ತಾಯಕ್ಕೆ ಒಪ್ಪಿ, ಮಂದರಪರ್ವತದಲ್ಲಿ ವಾಸಿಸುತ್ತಿದ್ದ ಕಾಶೀಪತಿಯ ಚಡಪಡಿಕೆ ವರ್ಣನಾತೀತ! ಈ ವಿವರಗಳನ್ನು ಅಮೃತಶಿಲೆಯಲ್ಲಿ ಉಬ್ಬುಚಿತ್ರಗಳಾಗಿ ಕೆತ್ತಿ 'ಕಾಶಿಖಂಡ'ದಲ್ಲಿರುವ ವಿವರಗಳ ಸಮೇತ ವಿಶ್ವನಾಥ ಮಂದಿರದ ಅಂಗಳದ ಗೋಡೆಗಳಲ್ಲಿ ಪ್ರದರ್ಶಿಸಲಾಗಿದೆ. ಕಾಶಿಕ್ಷೇತ್ರವನ್ನು ಅಗಲಿ ಬಂದ ಶಿವನ ವಿರಹ ತಾಪ, ಇದರ ಉಪಶಮನಕ್ಕೆ ವ್ಯರ್ಥ ಪ್ರಯತ್ನಗಳು ಇಲ್ಲಿ ವರ್ಣಿತವಾಗಿದೆ.

ತನ್ನಿಂದಾಗಿ ಶಿವನಿಗೆ ಒದಗಿದ ಕಷ್ಟವನ್ನು ಪರಿಹರಿಸಲು ನಿರ್ಧರಿಸಿದ ಬ್ರಹ್ಮನು ದಿವೋದಾಸನ ಆಳ್ವಿಕೆಯಲ್ಲಿ ಕಳಂಕವನ್ನು ಹುಟ್ಟುಹಾಕಲು ಪ್ರಯತ್ನಿಸಿ, ಸೋಲೊಪ್ಪಿ ಕಾಶಿಯಲ್ಲಿಯೇ ಉಳಿದುಬಿಟ್ಟ! ಇದೇ ಕಾರ್ಯಸಾಧನೆಗೆ ಅರುವತ್ತನಾಲ್ಕು ಯೋಗಿನಿಯರು, ಸೂರ್ಯದೇವ, ಒಬ್ಬರ ಹಿಂದೆ ಒಬ್ಬರು ಶಿವನ ಅಸಂಖ್ಯ ಗಣಗಳು ಹೊರಟರು. ಯಾರೂ ತಮ್ಮ ಕಾರ್ಯದಲ್ಲಿ ಸಫಲವಾಗಲಿಲ್ಲ! ಸಂಕೋಚದಿಂದಾಗಿ ಶಿವನನ್ನು ಕಾಣಲು ಹೋಗಲಿಲ್ಲ! ಕಾಶೀ ಕ್ಷೇತ್ರವಾಸಿಗಳಾದರು. ಅಂತಿಮವಾಗಿ ಶಿವನ ಪ್ರಿಯಪುತ್ರ ಗಣೇಶ ಮತ್ತು ಲಕ್ಷ್ಮೀಸಮೇತನಾಗಿ ಬಂದ ಮಹಾವಿಷ್ಣು ಅತ್ಯಂತ ಕುಶಲತೆಯಿಂದ ಕಾರ್ಯ ಸಾಧಿಸಿದರು. ದಿವೋದಾಸನ ಆಳ್ವಿಕೆ ಮುಕ್ತಾಯವಾಯಿತು. ಶಿವನ ತಲ್ಲಣ ತಂಪಾಯಿತು. ಅತಿ ಉತ್ಸಾಹದಿಂದ ಕಾಶಿಕ್ಷೇತ್ರಕ್ಕೆ ಹಿಂತಿರುಗಿದ.

ಜ್ಯೋತಿರ್ಲಿಂಗಗಳೆಲ್ಲವೂ 'ಸ್ವಯಂಭೂ' ಲಿಂಗಗಳು. ಮಾನವ ನಿರ್ಮಿತವಲ್ಲ ಎಂದು ಪುರಾಣಗಳು ಹೇಳುತ್ತವೆ. ಅನೇಕ ಕಾರಣಗಳಿಂದಾಗಿ ಶಿವ ಪ್ರತ್ಯಕ್ಷನಾಗಿ ಸ್ಥಾಯಿಯಾಗಿ ಲಿಂಗರೂಪದಲ್ಲಿ ಪ್ರತಿಷ್ಠಿತನಾಗಿ ಉಳಿಯುತ್ತಾನೆ. ಈ ರೀತಿಯ ಲಿಂಗಗಳಲ್ಲಿ ಆಕರ್ಷಣೆ ಮತ್ತು ಅನುಗ್ರಹ ಶಕ್ತಿ ಅಧಿಕ. ಶ್ರೀ ಶಂಕರಾಚಾರ್ಯರು ಈ ರೀತಿಯ ಹಲವಾರು ಲಿಂಗಗಳಲ್ಲಿ ಹನ್ನೆರಡು ಲಿಂಗಗಳನ್ನು ಪ್ರಧಾನವೆಂದು ಗುರುತಿಸುತ್ತಾರೆ. ಇವುಗಳನ್ನು 'ದ್ವಾದಶ ಜ್ಯೋತಿರ್ಲಿಂಗ'ಗಳೆನ್ನುತ್ತಾರೆ. ಇವುಗಳಲ್ಲಿ ಮೋಕ್ಷವನ್ನು ದಯಪಾಲಿಸುವ ಕಾಶೀಕ್ಷೇತ್ರದಲ್ಲಿ ನೆಲೆಸಿರುವ ಬಾಬಾ ವಿಶ್ವನಾಥ ಜ್ಯೋತಿರ್ಲಿಂಗವನ್ನು ಅತ್ಯಂತ ಜಾಗೃತ ದೇವತೆ ಎಂದು ಆರಾಧಿಸಲಾಗುತ್ತಿದೆ.

ಅನಾದಿಕಾಲದ ಆ ವಿಶ್ವನಾಥ ಜ್ಯೋತಿರ್ಲಿಂಗವನ್ನು ಪಾಷಂಡಿಗಳಾದ ವಿಧರ್ಮಿಯರು ನಾಶಮಾಡಿದರಲ್ಲ! ಈಗಿರುವುದು ಮಾನವ ನಿರ್ಮಿತ ತಾನೆ? ಎನ್ನುವ ಸಂಶಯ ಪೀಡಿತರಿಗೆ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಅದ್ಭುತಾನಂದರು ಹೇಳುತ್ತಾರೆ, ''ವಿಶ್ವನಾಥ ಅನಾದಿಲಿಂಗ. ಅರ್ಥಮಾಡಿಕೋ. ಔರಂಗಜೇಬ ಅದನ್ನು ಹೊಡೆದು ಹಾಕಿದರೆ ಏನಾಯಿತು? ಅವನನ್ನು ಭೂಮಿಯಿಂದ ಕಿತ್ತೆಸೆಯುವುದು ಸಾಧ್ಯವಾಯಿತೆ? ಆ ಅನಾದಿ ಲಿಂಗವನ್ನು ಬುಡಸಹಿತ ಕೀಳುವುದು ಯಾರಿಗಾದರೂ ಸಾಧ್ಯವೆ? ಶಿವಪೂಜೆಗೆ ಅಡಚಣೆಯಾಯಿತು, ಭಕ್ತರ ಸಲುವಾಗಿ ಭೂಮಿಯ ಮೇಲ್ಭಾಗವೆಲ್ಲ ಕಾಣುವಂತೆ ಭಗವಂತನ ಒಂದು ಚಿಹ್ನೆ ಇರುವ ಸಲುವಾಗಿ ವಿಶ್ವನಾಥನ ಲಿಂಗವನ್ನು ಪ್ರತಿಷ್ಠೆ ಮಾಡಲಾಯಿತು. ಮೂಲವಸ್ತು ಭೂಮಿಯ ಒಳಭಾಗದಲ್ಲಿಯೇ ಇದೆ. ನೀನೇಕೆ ಮತ್ತೆ ಮತ್ತೆ ನಕಲಿ ವಿಶ್ವನಾಥ ಎನ್ನುತ್ತಿಯೆ? ವಿಶ್ವನಾಥ ಅನಂತ ಕಾಲದವರೆಗೂ ವಿಶ್ವನಾಥನೇ. ಅವನಿಗೆ ಒಂದು ನಕಲಿ ಅಂತ ಇರುವುದು ಸಾಧ್ಯವೆ? ವಿಶ್ವನಾಥನಿಗೆ ಅದೇ ಜಾಗದಲ್ಲಿಯೇ ಶ್ರದ್ಧಾ ಭಕ್ತಿಯಿಂದ ಪೂಜಿಸುವುದು ಸಾಧ್ಯವಾದರೆ ನಿನ್ನ ಕಲ್ಯಾಣವಾಗುತ್ತದೆ. *('ಅದ್ಭುತ ಸಂತ', ಪುಟ-೩೯)*

ವಾರಾಣಸಿ ಕ್ಷೇತ್ರದಲ್ಲಿ ವಿಶ್ವನಾಥನ ದಿವ್ಯ ಸನ್ನಿಧಿ ಮತ್ತು ಅನ್ನಪೂರ್ಣೇಶ್ವರಿಯ ಮಂದಿರಗಳು ಪ್ರಧಾನವಾದುದು. ಇಲ್ಲಿ ಕಾಲಭೈರವ, ಬಡಾಗಣೇಶ, ನವಗೌರಿ, ನವದುರ್ಗೆ, ಐವತ್ತಾರು ವಿನಾಯಕರು, ದ್ವಾದಶ ಆದಿತ್ಯರು, ಅಷ್ಟಭೈರವರು, ಅರವತ್ತನಾಲ್ಕು ಯೋಗಿನಿಯರು ಇತ್ಯಾದಿ ಇನ್ನು ಅನೇಕ ದೇವ, ದೇವಿಯರಿಗೆ ಶಾಸ್ತ್ರೋಕ್ತವಾಗಿ ನಿತ್ಯಪೂಜೆ ನೆರವೇರಿಸಲಾಗುತ್ತದೆ.

ತನ್ನನ್ನು ಆಶ್ರಯಿಸುವ ಆರ್ತ, ಅರ್ಥಾರ್ಥಿ, ಜಿಜ್ಞಾಸು ಮತ್ತು ಜ್ಞಾನಿ ಇವರನ್ನು ಶ್ರೀಕೃಷ್ಣ ಸುಕೃತರು ಎನ್ನುತ್ತಾನೆ. ಕಾರಣ ಬ್ರಹ್ಮಜನ್ಮಗಳ ಪುಣ್ಯಸಂಸ್ಕಾರಗಳ ಫಲವಾಗಿಯೇ ಭಗವಂತನನ್ನು ಮಾತ್ರವೇ ಆಶ್ರಯಿಸುವ ಬುದ್ಧಿಯುಂಟಾಗುತ್ತದೆ ಎನ್ನಲಾಗಿದೆ. ಈ ಚತುರ್ವಿಧ ಭಕ್ತರೂ ತಮ್ಮ ತಮ್ಮ ಇಷ್ಟಾರ್ಥಗಳ ಈಡೇರಿಕೆಗೆ ಪುಣ್ಯಕ್ಷೇತ್ರಗಳ ದರ್ಶನಕ್ಕೆ, ಕೆಲಕಾಲ ಕ್ಷೇತ್ರವಾಸಕ್ಕೆ, ಸಾಧನೆಯ ಸಿದ್ಧಿಗೆ ತೀರ್ಥಯಾತ್ರೆಗೆ ಹೋಗುತ್ತಾರೆ.

ಅವರವರ ಶ್ರದ್ಧಾಭಕ್ತಿಗೆ ಅನುಸಾರವಾಗಿ ಇಷ್ಟಾರ್ಥಗಳು ಈಡೇರುವುದನ್ನು ಕಾಣಬಹುದಾಗಿದೆ. 'ಮನಸ್ಸಿನಂತೆ ಮಹಾದೇವ' ಎನ್ನುವ ಮಾತು ಮರೆಯಬಾರದು. ಯಾತ್ರೆಗೆ ಹೊರಡುವವರಲ್ಲಿ ಭಗವಂತನಲ್ಲಿ ಪೂರ್ಣವಿಶ್ವಾಸ, ಶ್ರದ್ಧೆ ಮತ್ತು ಭಕ್ತಿ ಇರಬೇಕಾಗುತ್ತದೆ. ಹಾಗಲ್ಲದೆ ಸುತ್ತಾಟದ ಚಟಕ್ಕೋ, ಮೋಜಿಗೋ ಯಾತ್ರೆ ಹೊರಟರೆ ವಿಶ್ವನಾಥನ ಬದಲಿಗೆ ಗುಂಡುಕಲ್ಲನ್ನು ಕಾಣುತ್ತಾರೆ!

ತೀರ್ಥಯಾತ್ರೆ ಕೈಗೊಳ್ಳುವ ಪದ್ಧತಿ ಎಲ್ಲ ಹಂತಗಳಲ್ಲೂ ಪ್ರಸ್ತುತ. ಆದರೆ ಹಿಂದೂ ಮತಾವಲಂಬಿಗಳಿಗೆ ಇರುವಷ್ಟು ಪುಣ್ಯ ಕ್ಷೇತ್ರಗಳು ಇತರರಿಗೆ ಅಲಭ್ಯ ! ಇಂದ್ರಿಯಗಳ ದಾಹವನ್ನು ಅಡಗಿಸಲು ಧರ್ಮವಿರುದ್ಧವಾಗಿ ನೀತಿಬಾಹಿರವಾಗಿ, ಪರಪೀಡನೆಯಿಂದ ಆರ್ಜಿಸಿದ ಐಶ್ವರ್ಯ ಅಧಿಕವಾದಾಗ ತಿರುಪತಿ ತಿಮ್ಮಪ್ಪನ ಹುಂಡಿಗೆ ನೋಟಿನ ಕಂತೆಗಳನ್ನು ಅರ್ಪಿಸಿದರೆ ಅದರ ಫಲ ಶೂನ್ಯ. ಧರ್ಮಮಾರ್ಗದಲ್ಲಿ ಶ್ರಮವಹಿಸಿ ಧನಾರ್ಜನೆ ಮಾಡಿ ತೀರ್ಥಯಾತ್ರೆ, ದಾನ-ಧರ್ಮಗಳನ್ನು ನೆರವೇರಿಸಿದಾಗ ಮಾತ್ರವೇ ಪುಣ್ಯಪ್ರಾಪ್ತಿ ಸಾಧ್ಯ ಎನ್ನುವುದು ಶಾಸ್ತ್ರಕಾರರ ಹಿತನುಡಿ.

ಪ್ರಾಚೀನ ಕಾಲದಿಂದಲೂ ಕಾಶೀಕ್ಷೇತ್ರ ಅಧ್ಯಾತ್ಮ, ಸಂಸ್ಕೃತಿ ಮತ್ತು ಶಿಕ್ಷಣ ಕೇಂದ್ರವಾಗಿ ಮುಂದುವರಿದಿದೆ. ಭಾರತ ದೇಶದಲ್ಲಿರುವ ಎಲ್ಲಾ ಮತಗಳು ಕಾಶೀಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸರ್ವಧರ್ಮ ಸಮನ್ವಯಕ್ಕೆ ಒತ್ತು ನೀಡಿ ಸ್ಥಾಪನೆಗೊಂಡಿರುವ ರಾಮಕೃಷ್ಣ ಮಿಷನ್ ಮತ್ತು ರಾಮಕೃಷ್ಣ ಆಶ್ರಮ ವಾರಾಣಸಿಯ ಲಕ್ಸಾ ವಿಭಾಗದಲ್ಲಿ ಸ್ಥಾಪನೆಗೊಂಡು ಜನಹಿತಕಾರ್ಯಗಳಲ್ಲಿ ತೊಡಗಿವೆ. ಪ್ರಾಚೀನ ಕಾಲದಿಂದಲೂ ಕಾಶೀನಗರವು ಜ್ಞಾನ ಪ್ರಸರಣಕ್ಕೆ ಪ್ರಸಿದ್ಧಿ ಪಡೆದಿದೆ. ದೇಶದ ನಾನಾ ಭಾಗಗಳಿಂದ ಪಂಡಿತರು ತಮ್ಮ ಪ್ರೌಢಿಮೆ ಪ್ರದರ್ಶಿಸಿ ಕೀರ್ತಿಗಳಿಸಲು ಇಲ್ಲಿಗೆ ಆಗಮಿಸುತ್ತಿದ್ದರು. ಈಗಲೂ ಇಲ್ಲಿ ಅನೇಕ ಸಂಸ್ಕೃತ ಹಾಗೂ ಇತರ ವಿದ್ಯಾಕೇಂದ್ರಗಳೊಂದಿಗೆ ಸಂಗೀತ, ನೃತ್ಯ ಇತ್ಯಾದಿ ಲಲಿತಕಲಾ ಕ್ಷೇತ್ರಗಳೂ ಕಾರ್ಯನಿರ್ವಹಿಸುತ್ತಿವೆ.

ಕ್ಷೇತ್ರದ ಹೆಗ್ಗಳಿಕೆ, 'ಕಾಶ್ಯಾಂ ಮರಣಾನ್ ಮುಕ್ತಿಃ' ಯನ್ನು ದೃಢೀಕರಿಸುವ ಭಗವಾನ್ ಶ್ರೀರಾಮಕೃಷ್ಣರ ದಿವ್ಯದರ್ಶನ ಈ ಪ್ರಬಂಧಕ್ಕೆ ಪೂರಕವೆಂದೇ ಹೇಳಬಹುದು.

ಕ್ರಿ.ಶ.೧೮೬೮ರಲ್ಲಿ ಕೊಲಕತ್ತೆಯ ದಕ್ಷಿಣೇಶ್ವರದಲ್ಲಿ ಕಾಳೀ ಮಂದಿರ ನಿರ್ಮಾಣ ಮಾಡಿದ ಶ್ರೀಮಂತ ಜಮೀನುದಾರಿಣಿಯ ಅಳಿಯ ಮಥುರಬಾಬು ಭಗವಾನ್ ಶ್ರೀರಾಮಕೃಷ್ಣರ ಮನವೊಲಿಸಿ ತನ್ನೊಂದಿಗೆ ಕಾಶೀಯಾತ್ರೆಗೆ ಕರೆತಂದ.

ಪ್ರಧಾನ ದೇವಾಲಯಗಳಲ್ಲಿ ವೈಭವೋಪೇತ ಪೂಜಾದಿಗಳನ್ನು ನೆರವೇರಿಸಿದ ನಂತರ, ಯಾತ್ರಾತಂಡ ಸುಸಜ್ಜಿತ ದೋಣಿಯಲ್ಲಿ ಗಂಗಾತೀರದ ಘಾಟ್‌ಗಳು, ದೇವಾಲಯಗಳು ಇತ್ಯಾದಿ ವೀಕ್ಷಿಸಲು ಹೊರಟಿತು. ದೋಣಿ ಪವಿತ್ರಗಂಗೆಯ ಮಂದವಾದ ಅಲೆಗಳ ಮೇಲೆ ನಿಧಾನವಾಗಿ ಸಾಗುತ್ತ ಮಣಿಕರ್ಣಿಕಾ ಘಾಟಿಗೆ ಸೇರಿತು. ಅಲ್ಲಿ ಶವಗಳ ದಹನಕಾರ್ಯ ನಡೆಯುತ್ತಿತ್ತು. ಅದರತ್ತಲೇ ನೋಡುತ್ತಿದ್ದ ಶ್ರೀರಾಮಕೃಷ್ಣರು ಥಟ್ಟನೆ ಎದ್ದು ನಿಂತರು. ಅವರ ಶರೀರಕ್ಕೆ ರೋಮಾಂಚನವಾಗಿತ್ತು. ಮುಖಮಂಡಲ ತೇಜೋಮಯ! ಮೃದು ಮಂದಹಾಸ ಸೂಸುತ್ತ ದೋಣಿಯ ಅಂಚಿಗೆ ನಡೆದು ಸಮಾಧಿಸ್ಥರಾದರು!! ಅವರ ರಕ್ಷಣೆಗೆ ಮಥುರಬಾಬು ಸನಿಹವೇ ನಿಂತಿದ್ದ. ಸ್ವಲ್ಪ ಸಮಯಾನಂತರ ಅವರು ಸಾಮಾನ್ಯ ಸ್ಥಿತಿಗೆ ಮರಳಿದರು.

ನಂತರದಲ್ಲಿ ತಾವು ಕಂಡ ದಿವ್ಯ ದೃಶ್ಯವನ್ನು ಅವರು ವಿವರಿಸಿದ್ದು ಹೀಗೆ – ''ದೀರ್ಘ ಶ್ವೇತಕಾಯ, ಪಿಂಗಳವರ್ಣದ ಜಟಾಜೂಟಧಾರಿ ಪುರುಷ ಗಂಭೀರವಾದ ನಡಿಗೆಯಲ್ಲಿ ಪ್ರತಿ ಚಿತೆಯ ಬಳಿಗೆ ಹೋಗಿ ದೇಹಿಯನ್ನು ಮೇಲೆತ್ತಿ ಕಿವಿಯಲ್ಲಿ ತಾರಕಮಂತ್ರವನ್ನು ಉಚ್ಚರಿಸುತ್ತಿದ್ದ! ಸರ್ವಶಕ್ತಿಮಯಿ ಜಗದಂಬೆ ಸ್ವಯಂ ಮಹಾಕಾಳಿಯ ರೂಪ ತಾಳಿ ಚಿತೆಯ ಮತ್ತೊಂದು ಮಗ್ಗುಲಲ್ಲಿ ಕುಳಿತು ಮೃತನ ಜನ್ಮಾಂತರಗಳ ಎಲ್ಲ ರೀತಿಯ ಸಂಸ್ಕಾರ ಬಂಧನಗಳನ್ನು ಕಿತ್ತೊಗೆಯುತ್ತ ಮುಕ್ತಿಯ ದ್ವಾರವನ್ನು ತೆರೆದು ಆ ಜೀವಿಯನ್ನು ಅಖಂಡದತ್ತ ಕಳಿಸುತ್ತಿದ್ದಳು! ಈ ರೀತಿಯಲ್ಲಿ, ಅನೇಕ ಕಲ್ಪಗಳ ಯೋಗ ಮತ್ತು ತಪಸ್ಸಿನಿಂದ ಮಾತ್ರ ಸಿದ್ಧಿಸಬಹುದಾದ ಅದ್ವೈತಾನುಭವದ ಭೂಮಾನಂದವನ್ನು ವಿಶ್ವನಾಥ ಜೀವಿಗಳಿಗೆ ಅನುಗ್ರಹಿಸಿ ಕೃತಾರ್ಥರನ್ನಾಗಿ ಮಾಡುತ್ತಿದ್ದ.''

ಶ್ರೀರಾಮಕೃಷ್ಣರ ಈ ಮಾತುಗಳನ್ನು ಕೇಳಿ ಬೆರಗಾದ ಶಾಸ್ತ್ರಜ್ಞ ಪಂಡಿತರು ಹೇಳಿದರು ''ಕಾಶೀಖಂಡದಲ್ಲಿ ಜೀವಿಗಳಿಗೆ ಮೋಕ್ಷಪ್ರಾಪ್ತಿಯ ವಿಷಯ ಬರೆದಿದೆಯಾದರೂ ಅದರ ಕ್ರಮ ಲಭ್ಯವಿಲ್ಲ. ತಮ್ಮ ದರ್ಶನದಿಂದಾಗಿ ಈ ನಿರ್ವಾಣಕ್ರಿಯೆ ಯಾವ ರೀತಿಯಲ್ಲಿ ಸಂಪನ್ನವಾಗುತ್ತದೆ ಎನ್ನುವುದು ಸ್ಪಷ್ಟವಾಯಿತು. ತಮ್ಮ ದರ್ಶನ, ಶಾಸ್ತ್ರದಲ್ಲಿ ಲಿಪಿಬದ್ಧವಾಗಿರುವುದನ್ನು ಮೀರಿ ಹೋಗಿದೆ.''

ಆದಿಶಂಕರಾಚಾರ್ಯರ ಕಾಲದಿಂದಲೂ, ಭಕ್ತರು ಗಂಗಾನದಿಯಲ್ಲಿ ಸ್ನಾನಾದಿಗಳನ್ನು ಪೂರೈಸಿ, ಸುಗಮವಾಗಿ ವಿಶ್ವನಾಥ ಮಂದಿರಕ್ಕೆ ಆಗಮಿಸಿ ತಾವು ತಂದ ಗಂಗಾಜಲದಿಂದ ಅಭಿಷೇಕ ಮಾಡುವ ಪದ್ಧತಿ ಇದೆ. ಕಾಲಾಂತರದಲ್ಲಿ ಮಂದಿರದ ಸುತ್ತ ವಾಸಗೃಹಗಳ ನಿರ್ಮಾಣದಿಂದಾಗಿ, ಸಣ್ಣ ಸಣ್ಣಗಲ್ಲಿಗಳಲ್ಲಿ, ಸುತ್ತಿಬಳಸಿ ಮಂದಿರಕ್ಕೆ ಬರುವಂತಾಯಿತು. ಮಂದಿರದ ಪ್ರಾಂಗಣವೂ ಅತಿ ಸಂಕೀರ್ಣವಾಗಿತ್ತು. ವಿಶ್ವನಾಥ ಕಾರಿಡಾರ್ ಯೋಜನೆಯ ಮೊದಲ ಹಂತ ಪೂರ್ಣವಾಗಿ ಹಿಂದಿನ ಅನನುಕೂಲಗಳು ಈಗ ಇಲ್ಲವಾಗಿವೆ. ಮೊದಲು ವಿಶ್ವನಾಥಮಂದಿರದ ವಿಸ್ತೀರ್ಣ ಕೇವಲ ಮೂರು ಸಾವಿರ ಸ್ಕ್ವೇರ್ ಫೀಟ್ ಇದ್ದು, ಈಗ ಐದುಲಕ್ಷ ಸ್ಕ್ವೇರ್ ಫೀಟ್ ಆಗಿದೆಯೆಂದು ಹೇಳಲಾಗಿದೆ. ಈಗ ಗಂಗಾತೀರದ ಮುಖ್ಯವಾದ ಘಾಟ್‌ಗಳಲ್ಲಿ ಒಂದಾದ ನೇಪಾಳದ ರಾಜ ನಿರ್ಮಿಸಿದ ಲಲಿತ್ ಘಾಟ್‌ನಿಂದ ನೇರವಾಗಿ ಮಂದಿರಕ್ಕೆ ಬರಬಹುದಾಗಿದೆ. ಮುಸ್ಲಿಮರ ಕ್ರೂರ ದೃಷ್ಟಿಯಿಂದ ದೇವಾಲಯಗಳನ್ನು ರಕ್ಷಿಸಲು ಮನೆಗಳಾಗಿ ಮಾರ್ಪಟ್ಟಿದ್ದ ನಲುವತ್ತು ಮಂದಿರಗಳು ಬೆಳಕು ಕಂಡಿವೆ. ಈಗ ಮಂದಿರದ ಪ್ರಾಂಗಣ ವಿಶಾಲವಾಗಿ ಸುಂದರ ಕಮಾನುಗಳು ಹಾಗೂ ಇತರ ಸೌಕರ್ಯಗಳೊಂದಿಗೆ ಸುಸಜ್ಜಿತವಾಗಿದೆ.

ವಿಶ್ವನಾಥ ಮಂದಿರದಲ್ಲಿ ಕೈಗೊಳ್ಳಲಾಗುವ ಪೂಜೆ, ಪೂಜಾ ಸಮಯ ಇತ್ಯಾದಿ ಅಗತ್ಯ ವಿವರಗಳನ್ನು ಇಂಟರ್ನೆಟ್ ಮೂಲಕ ತಿಳಿದುಕೊಳ್ಳಬಹುದು. ವಸತಿ, ವಾಹನಗಳನ್ನು ಕಾಯ್ದಿರಿಸಬಹುದು. ✽

*(ವಾರಾಣಸಿಯ ಇತರ ಹಲವಾರು ದೇವಾಲಯಗಳ ವಿವರಗಳನ್ನು ಬಯಸುವವರು ಕಾಶೀಯಾತ್ರೆಗೆ ಕೈಪಿಡಿಯಂತಿರುವ ಇದೇ ಲೇಖಕಿಯ 'ಕಾಶಿ ಪುಣ್ಯ ರಾಶಿ' ಗ್ರಂಥವನ್ನು ಅವಲೋಕಿಸಬಹುದು. 'ವಿವೇಕಹಂಸ' ಪ್ರಕಾಶನ, ಬೆಂಗಳೂರು.)*